ಆ) ಶೃಂಗೇರಿ ಪಟ್ಟಣ ಪಂಚಾಯಿತಿಯಲ್ಲಿ ರಸ್ತೆ ಕಾಮಗಾರಿ ಪೂರ್ಣಗೊಂಡಿದ್ದು, ಚರಂಡಿ ಮತ್ತು ರೆಟ್ಟೈನಿಂಗ್ ವಾಲ್ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.

ಕೊಪ್ಪ ಪಟ್ಟಣ ಪಂಚಾಯಿತಿಯಲ್ಲಿ ಡಾಂಬರ್ ರಸ್ತೆ ಕಾಮಗಾರಿ ಪೂರ್ಣಗೊಂಡಿದ್ದು, ಕಾಂಕ್ರೀಟ್ ರಸ್ತೆ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. ಚರಂಡಿ ಕಾಮಗಾರಿಗಳನ್ನು ಕೈಗೆತ್ತಿಕೊಂಡಿರುವುದಿಲ್ಲ.

ಇ) ಶೃಂಗೇರಿ ಮತ್ತು ಕೊಪ್ಪ ಪಟ್ಟಣ ಪಂಚಾಯಿತಿಗಳು ಮಲೆನಾಡು ಪ್ರದೇಶವಾಗಿರುವುದರಿಂದ ಪ್ರಸ್ತುತ ಮಳೆಗಾಲವಾಗಿರುವುದರಿಂದ ಹಾಗೂ ಮರಳಿನ ಸಮಸ್ಯೆ ಇರುವುದರಿಂದ ಕಾಮಗಾರಿಗಳನ್ನು ನಿಗಧಿತ ಸಮಯದಲ್ಲಿ ನಿರ್ವಹಿಸಲು ಸಾಧ್ಯವಾಗುತ್ತಿರುವುದಿಲ್ಲ.

ಈ) ಮಳೆಗಾಲ ಮುಗಿದ ನಂತರ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮವಹಿಸಲಾಗುತ್ತದೆ.

ಖಾಸಗಿ ದೇವಾಲಯಗಳು

1208(2045); ಮಾನ್ಯ ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್ (ನಿಪ್ಪಾಣಿ)

ಅ) ರಾಜ್ಯದಲ್ಲಿರುವ ಯಾವ ಯಾವ ವರ್ಗದ ಶ್ರೇಣಿಯ ಖಾಸಗಿ ದೇವಾಲಯಗಳನ್ನು ಸರ್ಕಾರ ತನ್ನ ಸುಪರ್ದಿಗೆ ತೆಗೆದುಕೊಂಡಿದೆ; ಜಿಲ್ಲಾವಾರು ವಶಪಡಿಸಿಕೊಂಡಿರುವ ದೇವಸ್ಥಾನಗಳ ಸಂಖ್ಯೆ ಎಷ್ಟು (ಹೆಸರುಗಳ ವಿವರ ನೀಡುವುದು);

ಆ) ದೇವಾಲಯಗಳನ್ನು ವಶಪಡಿಸಿಕೊಳ್ಳಲು ಕಾರಣಗಳೇನು; ಇವುಗಳ ವಾರ್ಷಿಕ ಆದಾಯವೇನು ಆದಾಯ ಮೂಲ ಯಾವುದು; ಇವುಗಳ ಪೈಕಿ ವಿವಾದ, ಭ್ರಷ್ಟಾಚಾರ, ವಂಚನೆ ಪ್ರಕರಣಗಳು ಬೆಳಕಿಗೆ ಬಂದಿವೆಯೇ (ವಿವರ ನೀಡುವುದು);

ಇ) ಸದರಿ ದೇವಾಲಯಗಳು ಖಾಸಗಿ ಒಡೆತನದಲ್ಲಿದ್ದವೇ ಅಥವಾ ವೈಯಕ್ತಿಕ ಟ್ರಸ್ಟ್ ರಚಿಸಿಕೊಳ್ಳಲಾಗಿತ್ತೆ. ಸುಪರ್ದಿಗೆ ಪಡೆದ ನಂತರ ಸದರಿ ದೇವಾಲಯಗಳಿಗೆ ಆಡಳಿತಾಧಿಕಾರಿಯನ್ನು ಸರ್ಕಾರ ನೇಮಕ ಮಾಡಿದೆಯೇ;

ಈ) ಸರ್ಕಾರ ವಶಕ್ಕೆ ಪಡೆದ ನಂತರ ಅಲ್ಲಿ ಬರುತ್ತಿರುವ ಆದಾಯ ಪ್ರಮಾಣ ಎಷ್ಟು; ಇದನ್ನು ಯಾವ ಉದ್ದೇಶಕ್ಕೆ ಬಳಕೆ ಮಾಡಿಕೊಳ್ಳಲಾಗುತ್ತಿದೆ (ವಿವರ ಒದಗಿಸುವುದು)?

ಉ) ತಪ್ಪಿತಸ್ಥ ಆಡಳಿತ ಮಂಡಳಿಯವರ ಮೇಲೆ, ಟ್ರಸ್ಟ್‌ಗಳ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಪಶುಸಂಗೋಪನಾ ಮತ್ತು ಮುಜರಾಯಿ ಸಚಿವರು)

ಅ) ರಾಜ್ಯದ ಒಟ್ಟು 10 ಖಾಸಗಿ ದೇವಸ್ಥಾನಗಳನ್ನು ಸರ್ಕಾರದ ವಶಕ್ಕೆ ಪಡೆಯಲಾಗಿದೆ. ಜಿಲ್ಲಾವಾರು ವಿವರ ಅನುಬಂಧದಲ್ಲಿ ಒದಗಿಸಿದೆ.

ಆ) ಖಾಸಗಿ ದೇವಾಲಯಗಳ ಆಡಳಿತದಲ್ಲಿ ಅವ್ಯವಹಾರ ಹಣಕಾಸು ದುರುಪಯೋಗದ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದ ನಂತರದಲ್ಲಿ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಕಾಯ್ದೆಯ ಸೆಕ್ಷನ್ 42 & 43ರಡಿಯಲ್ಲಿ ವಿಚಾರಣೆ ನಡೆಸಿ ದೂರುಗಳು ಸಾಬೀತಾದಲ್ಲಿ ಅಂತಹ ದೇವಾಲಯಗಳನ್ನು ಸರ್ಕಾರವು ಘೋಷಿತ ಸಂಸ್ಥೆಗಳೆಂದು ಘೋಷಿಸಿ ದೇವಾಲಯದ ಆಡಳಿತವನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಲಾಗುತ್ತಿದೆ. ದೇವಾಲಯಗಳಿಗೆ ಬರುವ ಭಕ್ತರು ನೀಡುವ ಕಾಣಿಕೆ, ಹುಂಡಿಯಿಂದ ಬರುವ ಆದಾಯವು ಪ್ರಮುಖ ಆದಾಯವಾಗಿರುತ್ತದೆ.

ಇ) ಈವರೆಗೂ ಸರ್ಕಾರದ ಸುಪರ್ದಿಗೆ ತೆಗೆದುಕೊಂಡಿರುವ ದೇವಾಲಯಗಳು ಖಾಸಗಿ ಟ್ರಸ್ಟಿನ ಒಡೆತನದಲ್ಲಿ ನಿರ್ವಹಿಸಲ್ಪಡುತ್ತಿದ್ದವು. ಸದರಿ ದೇವಾಲಯಗಳನ್ನು ಸರ್ಕಾರದ ಸುಪರ್ದಿಗೆ ಪಡೆದು ಆಡಳಿತ ನಿರ್ವಹಣೆಗಾಗಿ ಆಡಳಿತಾಧಿಕಾರಿಗಳನ್ನು ನೇಮಕ ಮಾಡಲಾಗಿದೆ.

ಈ) ಸದರಿ ದೇವಾಲಯಗಳನ್ನು ಸರ್ಕಾರವು ವಶಕ್ಕೆ ಪಡೆದ ನಂತರದಲ್ಲಿ ಆದಾಯದ ಪ್ರಮಾಣವು ಗಣನೀಯವಾಗಿ ಹೆಚ್ಚಳಗೊಂಡಿರುತ್ತದೆ. ದೇವಾಲಯದ ಆದಾಯವನ್ನು ಅದೇ ದೇವಾಲಯದ ಮೂಲಭೂತ ಸೌಕರ್ಯ, ವಾರ್ಷಿಕ ರಥೋತ್ಸವ, ವಿಶೇಷ ಧಾರ್ಮಿಕ ಸಮಾರಂಭಗಳು ಸಿಬ್ಬಂದಿ ವೇತನ ಹಾಗೂ ದೈನಂದಿನ ಪೂಜಾ ಕಾರ್ಯಗಳಿಗೆ ಬಳಕೆ ಮಾಡಿಕೊಳ್ಳಲಾಗುತ್ತಿದೆ.

ಉ) ತಪ್ಪಿತಸ್ಥ ಆಡಳಿತ ಮಂಡಳಿ ಹಾಗೂ ಟ್ರಸ್ಟ್‌ಗಳಿಂದ ದೇವಾಲಯಗಳ ಆಡಳಿತವನ್ನು ಸರ್ಕಾರವು ಸುಪರ್ದಿಗೆ ತೆಗೆದುಕೊಂಡಿರುತ್ತದೆ.

ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ (1997) ಕಲಂ 42 ಮತ್ತು 43 ರನ್ವಯ ಘೋಷಿತ ಸಂಸ್ಥೆಗಳೆಂದು ಘೋಷಿಸಿರುವ ಸಂಸ್ಥೆಗಳ ಪಟ್ಟಿ

ಕ್ರ ಸಂ:	ಜಿಲ್ಲೆ	ಸಂಸ್ಥೆಯ ಹೆಸರು		ಸರ್ಕಾರದ ಆದೇಶ/ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ:
1.	ಬೆಂಗಳೂರು ನಗರ	1.	ಶ್ರೀ ಪ್ರಸನ್ನ ಆಂಜನೇಯಸ್ವಾಮಿ ದೇವಾಲಯ, ಮಹಾಲಕ್ಷ್ಮೀ ಬಡಾವಣೆ, ಬೆಂಗಳೂರು	ಕಂಇ 94 ಮುಅಚಿ 2011, ದಿನಾಂಕ: 11.04.2012
		2.	ಶ್ರೀ ಪ್ರಸನ್ನ ಗಣೇಶ ಮತ್ತು ಶ್ರೀ ವೆಂಕಟರಮಣಸ್ವಾಮಿ ದೇವಾಲಯ, ಸಂಪಂಗಿ ರಾಮನಗರ, ಬೆಂಗಳೂರು	ಕಂಇ 96 ಮುಅಚಿ 2012, ದಿನಾಂಕ: 11.10.2012(12.12.2012)
		3.	ಶ್ರೀ ಮಂಜುನಾಥಸ್ವಾಮಿ ದೇವಾಲಯ, ಸಾಣೆಗುರುವನಹಳ್ಳಿ ಗ್ರಾಮ, ಬೆಂಗಳೂರು ಉತ್ತರ ತಾಲ್ಲೂಕು.	ಕಂಇ 112 ಮುಅಚಿ 2012, ದಿನಾಂಕ: 19.11.2012
		4.	ಶ್ರೀ ವಿನಾಯಕ ದೇವಾಲಯ, ಜಯನಗರ, ಬೆಂಗಳೂರು	ಕಂಇ 87 ಮುಅಚಿ 2013, ದಿನಾಂಕ: 02.01.2013
		5.	ಶ್ರೀ ಭಗವಾನ್ ಮಾರುತಿ ದೇವಾಲಯ, ಪ್ಯಾಲೇಸ್ ರಸ್ತೆ, ಬೆಂಗಳೂರು	ಕಂಇ 07 ಮುಅಚಿ 2014, ದಿನಾಂಕ: 13.05.2014
		6.	ಶ್ರೀ ಮಾರಮ್ಮ ದೇವಾಲಯ, ಮಡಿವಾಳ, ಬೆಂಗಳೂರು ದಕ್ಷಿಣ ತಾಲ್ಲೂಕು.	ಕಂಇ 23 ಮುಆಚಿ 2015, ದಿನಾಂಕ: 06.06.2015
2.	ಬಳ್ಳಾರಿ	ಶ್ರೀ ಆಂಜನೇಯಸ್ವಾಮಿ ದೇವಾಲಯ, ಬಂಡೆಚ್ಚಿ ರಸ್ತೆ, ಬಲಾಕ್ ನಂ:21, ವಾರ್ಡ್ ನಂ: 22, ಬಳ್ಳಾರಿ ನಗರ.		ಕಂಇ 118 ಮುಅಚಿ 2012, ದಿನಾಂಕ: 11.01.2013
3.	ಮಂಡ್ಯ	ಶ್ರೀ ಅಹಲ್ಯಾ ದೇವಿ ದೇವಾಲಯ, ಆರತಿಉಕ್ಕಡ ಗ್ರಾಮ, ಶ್ರೀ ರಂಗಪಟ್ಟಣ ತಾಲ್ಲೂಕು		ಕಂಇ 70 ಮುಅಚಿ 2012, ದಿನಾಂಕ: 18.02.2012
4.	ದಾವಣಗೆರೆ	ಶ್ರೀ ದುರ್ಗಾಂಬಿಕಾ ದೇವಾಲಯ, ಶಿವಾಜಿ ಸರ್ಕಲ್, ದಾವಣಗೆರೆ ಬೌನ್		ಕಂಇ 25 ಮುಅಚಿ 2013, ದಿನಾಂಕ: 2013
5.	ತುಮಕೂರು	ಶ್ರೀ ಆಂಜನೇಯಸ್ವಾಮಿ ದೇವಾಲಯ, ಕಾಡುಗುಜ್ಜನಹಳ್ಳಿ ಗ್ರಾಮ, ಊರ್ಡಿಗೆರೆ ಹೋಬಳಿ, ತುಮಕೂರು ತಾಲ್ಲೂಕು		ಕಂಇ 03 ಮುಆಚಿ 2015, ದಿನಾಂಕ: 23.01.2015